ಸಾಕ್ಷಿಯ ಹೆಸರುಃ ಹೇಮಲತಾ

ದಿನಾಂಕ 07-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ.ಕೆ.ಎಂ ವಕೀಲರಿಂದ,

8) ಕೆ ಆರ್ ನಗರದಲ್ಲಿ ನಮಗೆ ಸ್ವಂತ ಆಸ್ತಿ ಇಲ್ಲ ಎಂದರೆ ಸರಿ. ನಮ್ಮ ಯಜಮಾನರಿಗೆ ಒಂದು ಮಂಗಳೂರು ಹಂಚಿನ ಮನೆ ಇದೆ ಎಂದರೆ ಸರಿ. ಈ ಮನೆಯನ್ನು ಮಾರಾಟ ಮಾಡಲು ನಾಗೇಶ ಬಿನ್ ಶಿವಶಂಕರ ಅವರೊಂದಿಗೆ ಕ್ರಯದ ವ್ಯವಹಾರ ಮಾಡಿದ್ದೇವು ಎಂದರೆ ಸಾಕ್ಷಿ ವ್ಯವಹಾರ ಮಾಡಿದ್ದೇವು ಆದರೆ ಕ್ರಯದ ವ್ಯವಹಾರ ಮಾಡಿಲ್ಲ ಎನ್ನುತ್ತಾರೆ ದಿಃ 07-04-2014 ರಂದು ಸದರಿ ಶಿವಶಂಕರ ರವರ ಮಗ ನಾಗೇಶ ರವರಿಗೆ ನೊಂದಾಯಿತ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದೇವು ಎಂದರೆ ಸರಿ. ಆ ವ್ಯವಹಾರದಲ್ಲಿ ನಾನು ಎಷ್ಟು ಹಣವನ್ನು ಮುಂಗಡವಾಗಿ ಪಡೆದಿದ್ದೇವು ಎಂದು ನೆನಪಿಲ್ಲ. ಸದರಿ ಕ್ರಯದ ವ್ಯವಹಾರವನ್ನು 4 ಲಕ್ಷ ರೂಪಾಯಿಗೆ ನಿಷ್ಕರ್ಶೆ ಮಾಡಿ ರೂ. 3,50,000/- ಗಳನ್ನು ಮುಂಗಡವಾಗಿ ಪಡೆದುಕೊಂಡಿದ್ದೇವೆ ಎಂದರೆ ನನಗೆ ನೆನಪಿಲ್ಲ ಅದು ನಮ್ಮ ಯಜಮಾನರು ಮಾಡಿದ ವ್ಯವಹಾರ ಎನ್ನುತ್ತಾರೆ. ಸದರಿ ವ್ಯವಹಾರದ ಹಣವನ್ನು ವಾಪಸ್ಸು ನೀಡಿ ವ್ಯವಹಾರವನ್ನು ರದ್ದು ಮಾಡಿಕೊಂಡಿರುತ್ತೀರಿ ಎಂದರೆ ಅದು ನಮ್ಮ ಯಜಮಾನರಿಗೆ ಗೊತ್ತು ಎನ್ನುತ್ತಾರೆ. ನಾವು ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ನೊಂದಾಯಿತ ರದ್ದತಿ ಪತ್ರವನ್ನು ಸಬ್‌ರಿಜಿಸ್ಟ್ರರ್ ಕಚೇರಿಯಲ್ಲಿ ಸಹಿ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ

9) ಚೀಟಿಯಿಂದ ಬಂದ ಹಣವನ್ನು ಅವರಿಗೆ ವಾಪಸ್ಸು ಕೋಟ್ಟಿರುತ್ತೇವೆ. ಆ ಚೀಟಿ ಹಣ ಎಷ್ಟು ಬಂದಿತ್ತು ಹಾಗೂ ಯಾರಿಂದ ಪಡೆದಿದ್ದೇವು ಎಂದು ನಮ್ಮ ಯಜಮಾನರಿಗೆ ಗೊತ್ತು. ಹೆಚ್ಚಿಗೆ ಹಣವನ್ನು ಮಾರಾಟ ಮಾಡುತ್ತೇವೆ ಎಂದು ನೀವು ಹೆಚ್ಚಿಗೆ ಹಣವನ್ನು ಕೊಟ್ಟರೆ ಮಾರಾಟ ಮಾಡುವುದಾಗಿ ಹೇಳಿ ನಾಗೇಶರವರಿಂದ ಕ್ರಯದ ಕರಾರು ಪತ್ರವನ್ನು ರದ್ದು ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ದಿಃ 19-03-2015 ಶ್ರೀಮತಿ ನಾಗರತ್ನಮ್ಮ ರವರಿಗೆ ರೂ. 7,50,000 ಲಕ್ಷ



ರೂಪಾಯಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟು ಮುಂಗಡವಾಗಿ ರೂ5,00,000/- ಗಳನ್ನು ಪಡೆದು ಆ ಹಣದಲ್ಲಿ ನಾಗೇಶ ರವರಿಗೆ ಮುಂಗಡ ಹಣ ಮತ್ತು ಹೆಚ್ಚು ಹಣವನ್ನು ಕೊಟ್ಟು ಕ್ರಯದ ಕರಾರು ರದ್ಧತಿ ಪತ್ರವನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ಸುಳ್ಳು2020 ರಲ್ಲಿ ನನ್ನ ಮಗಳು

ಪೂಜಾ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮೈಸೂರಿನ ವಿಜಯನಗರ ಶಾಖೆಯಲ್ಲಿ ಖಾತೆ ಇದೆ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಶಾಲೆಯಲ್ಲಿ ಇರುವಾಗ ಕರ್ನಾಟಕ ಬ್ಯಾಂಕ್. ಕೆ.ಆರ್.ನಗರ ಶಾಖೆಯಲ್ಲಿ ಬ್ಯಾಂಕ್ ಖಾತೆ ತೆರೆಯಲಾಗಿತ್ತು .

10) ನನ್ನ ಮಗಳು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಆರೋಪಿಗೆ ನೋಟಿಸನ್ನು ಕಳುಹಿಸಲು ಆರೋಪಿಯ ವಿಳಾಸವನ್ನು ನಮ್ಮ ವಕೀಲರಿಗೆ ನಾನೇ ನೀಡಿದ್ದೇ. ಆರೋಪಿ ಎಂದೂ ನನಗೆ ಹಣವನ್ನು ಕೇಳಿಲ್ಲ, ಸಾಲವಾಗಿ ಹಣನಮ್ನು ಪಡೆದಿಲ್ಲ ಹಾಗೂ ನನ್ನ ಮತ್ತು ಆರೋಪಿಯ ಮಧ್ಯೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ ಎಂದರೆ ಸುಳ್ಳು. ಆರೋಪಿ ಸಾಲದ ಭದ್ರತೆಗೋಸ್ಕಕರ ನನಗೆ ಚೆಕ್ಕನ್ನು ನೀಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಖುದ್ದಾಗಿ ಹೋಗಿ ಹಣವನ್ನು ಢ್ರಾ ಮಾಡಿಕೊಂಡು ಬಂದಿರುತ್ತೇನೆ. ಆರೋಪಿ ಹಳೆಯ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟಿಸಿಕೊಂಡಿರುತ್ತಾರೆ ಎಂದರೆ ಸರಿ. ಅವರು ಹಳೆ ಮನೆಯಿಂದ ಹೊಸ ಮನೆಗೆ ಶೀಫ್ಟ್ ಆಗುವಾಗ ಅವರ ಚೆಕ್ಕು ಹಾಗೂ ಇತರೆ ದಾಖಲಾತಿಗಳು ಮಿಸ ಪ್ಲೇಸ್ ಆಗಿರುತ್ತವೆ ಎಂದರೆ ಸುಳ್ಳು.

11) ನಾನು ಹಾಜರುಪಡಿಸಿದ ನಿಪಿ 8 ಬ್ಯಾಂಕ್ ಸ್ಟೇಟಮೆಂಟ್ ನಲ್ಲಿ ದಿಃ 15-10-2020 ರೂ. 5 ಲಕ್ಷ ನನ್ನ ಖಾತೆಗೆ ಹಣ ವರ್ಗಾವಣೆ ಆಗಿದ್ದು. ಅದನ್ನು ನನ್ನ ತಮ್ಮ ನನಗೆ ನೀಡಿರುತ್ತಾರೆ. ಈ ಹಣವನ್ನು ನಾನು ತಮ್ಮನಿಗೆ ನೀಡಿದ ಸಾಲವನ್ನು ವಾಪಸ್ಸು ಕೊಟ್ಟಿರುತ್ತಾನೆ. ನಾನು ನನ್ನ ತಮ್ಮನಿಗೆ ಈ ಸಾಲವನ್ನು ಆತ ಈ ಹಣ ನೀಡುವ 2-3 ವರ್ಷಗಳ ಹಿಂದೆ ನೀಡಿದ್ದೇ. ನಾನು ಈ ಹಣವನ್ನು ನನ್ನ ತಮ್ಮನಿಂದ ರೂ. 5,00,000 ಲಕ್ಷ ರೂಪಾಯಿಗಳನ್ನು ನಾಗರತ್ನಮ್ಮ ರವರ ವ್ಯವಹಾರ ಬಗೆಹರಿಸಿಕೊಳ್ಳಲು ಸಾಲವಾಗಿ ಪಡೆದಿದ್ದೆ ಎಂದರೆ ಸರಿಯಲ್ಲ. ನನ್ನ ತಮ್ಮ ಪ್ರಕಾಶ ರವರ ಮನೆಗೆ ಆಗಾಗಹೋಗುತ್ತಿದ್ದರು ಎಂದರೆ ಸಾಕ್ಷಿ ಅವರಿಬ್ಬರೂ ಸ್ನೇಹಿತರು ಎನ್ನುತ್ತಾರೆ. ಆರೋಪಿಯ ಗಮನಕ್ಕೆ ಬಾರದೆ ಅವರ ಚೆಕ್ಕ ಬುಕ್ ಅನ್ನು ನನ್ನ ತಮ್ಮ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸುಳ್ಳು. ಈಗ 2 ವರ್ಷಗಳಿಂದ ನನ್ನ ತಮ್ಮ ಮತ್ತು ಆರೋಪಿಯ ಸಂಬಂಧ ಸರಿಯಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ವೈಯಕ್ತಿಕ ದ್ವೇಷದಿಂದ ಆರೋಪಿಯ ಚೆಕ್ಕಿಗೆ ನಾನು ಮತ್ತು ನನ್ನ ತಮ್ಮ ಷರೀಕ್ ಜೊತೆಯಾಗಿ ಆರೋಪಿಯ ಸಹಿಯನ್ನು ಪೋರ್ಜರಿ ಮಾಡಿ. ಚೆಕ್ಕನ್ನು ಭರ್ತಿ ಮಾಡಿ ಈ ಸುಳ್ಳು ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

12) ನಾನು ಈ ಚೆಕ್ಕನ್ನು ಬ್ಯಾಂಕಿಗೆ ಸಲ್ಲಿಸುವ 1 ವರ್ಷ ಮುಂಚೆಯೇ ಆರೋಪಿ ತಮ್ಮ ಚೆಕ್ಕು ಕಳೆದಿದೆ ಎಂದು ಬ್ಯಾಂಕಿಗೆ ಮಾಹಿತಿಯನ್ನು ನೀಡಿರುತ್ತಾರೆ ಎಂದರೆ ಸುಳ್ಳು. ಆದ್ದರಿಂದ ಆರೋಪಿಯ ಬ್ಯಾಂಕಿನವರು ನಾನು ಚೆಕ್ಕನ್ನು ನಗದಿಕರಣಕ್ಕಾಗಿ ಸಲ್ಲಿಸಿದಾಗ ಪೇಮೆಂಟ್ ಸ್ಟಾಪ್ಡ್ ಬೈ ಢ್ರಾವರ್ ಎಂಬ ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಸುಳ್ಳು. ನಾನು ಬ್ಯಾಂಕಿಗೆ ಚೆಕ್ಕನ್ನು

ಸಲ್ಲಿಸಿದಾಗ ನಾವು ಬ್ಯಾಂಕಿನಿಂದ ಹಣ ಪಡೆಯಲು ಆಗುವುದಿಲ್ಲ ಎಂದು ಬ್ಯಾಂಕಿನವರು ಹಿಂಬರಹವನ್ನು ನೀಡಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ನಾವು ನೀಡಿದ ನೋಟಿಸನಲ್ಲಿ ಡ್ರಾಯರ್ ಮೂಲಕ ಪಾವತಿಯನ್ನು ನಿಲ್ಲಿಸಿದ್ದರೂ ಸಹ ಉದ್ದೇಶ ಪೂರ್ವಕವಾಗಿ ಮೋಸ ಮಾಡಲು ಸಹಿ ಮಾಡಿದ ಚೆಕ್ಕನ್ನು ನೀಡಿರುತ್ತೇವೆ ಎಂದರೆ ಸರಿ. ನಾವು ಬ್ಯಾಂಕಿಗೆ ಸಲ್ಲಿಸುವ ಮೊದಲೇ ಆರೋಪಿಯ ಚೆಕ್ಕು ಕಳೆದಿದೆ ಎಂದು ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಾವು ಆರೋಪಿಯ ಚೆಕ್ಕಿಗೆ ಅವರ ಸಹಿಯನ್ನು ಫೋರ್ಜರಿ ಮಾಡಿರುತ್ತೇವೆ ಎಂದು ಗೊತ್ತಿದ್ದರುಾ ಸಹ. ಅದು ಆರೋಪಿಯ ಸಹಿ ಎಂದು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

13)ಪ್ರಕಾಶ್ ರವರಿಗೆ ಊರಿನಲ್ಲಿ ಮನೆಗಳು, ಜಮೀನು ಮತ್ತು ನಿವೇಶನಗಳು ಇದ್ದು, ಅವರು ಆರ್ಥಿಕವಾಗಿ ಚೆನ್ನಾಗಿ ಇದ್ದಾರೆ ಎಂದರೆ ಸುಳ್ಳು. ಆರೋಪಿಯ ಹೆಂಡತಿಯ ಹೆಸರಿನಲ್ಲಿ 3 ಅಂತಸ್ತಿನ ಆರ್‌ಸಿಸಿ ಮನೆ ಇದೆ ಎಂದರೆ ಸುಳ್ಳು. ನಾವೇ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಲಮಾಡಿಕೊಂಡು ದಿನ ನಿತ್ಯದ ಜೀವನ ನಡೆಸುತ್ತಿದ್ದೇವೆಎಂದರೆ ಸುಳ್ಳು. ನಾನು ಆರೋಪಿಗೆ ರೂ.8,75,.000/- ಗಳನ್ನು ಸಾಲವಾಗಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಹಾಗೂ ಅಕ್ರಮ ಲಾಭವನ್ನು ಪಡೆಯುವ ಉದ್ದೇಶದಂದ ಈ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವುದೇ ಸಾಲ ಪಡೆದಿಲ್ಲ, ಆದ್ದರಿಂದ ಅವರು ಚೆಕ್ಕ ಬೌನ್ಸ ಅಪರಾಧವನ್ನು ನನ್ನ ವಿರುದ್ಧ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿಗೆ ವಕೀಲರ ಮುಖಾಂತರ ನೋಟಿಸನ್ನು ನೀಡಿದ ನಂತರ ಅವರು ವಾಸ್ತವಂಶವನ್ನು ತಿಳಿಸಿ ಮರು ಉತ್ತರವನ್ನು ನೀಡಿದ್ದರು ಎಂದರೆ ಸುಳ್ಳು. ಅವರು ಸೂಕ್ತವಾಗಿ ಮರು ಉತ್ತರವನ್ನು ನೀಡಿದ್ದರುಾ ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

14) ಆರೋಪಿ ನನಗೆ ಹಣ ಕೇಳಿದ್ದರು ಎಂದು ಹೇಳಿದ ದಿನ ಹಾಗೂ ನಾನು ಆರೋಪಿಗೆ ಹಣ ನೀಡಿದ್ದೆ ಎಂದು ಹೇಳಿದ ದಿನ ಆರೋಪಿ ಕಛೇರಿ ಕರ್ತವ್ಯದಲ್ಲಿ ಇದ್ದರು ಎಂದರೆ ಸುಳ್ಳು. ಕೆ.ಆರ್ ನಗರದಿಂದ ಸಕಲೇಶಪುರ 100 ಕೀ.ಮಿ. ದೂರ ಇದೆ ಎಂದರೆ ಗೊತ್ತಿಲ್ಲ. ಸಕಲೇಶಪುರ ದಿಂದ ಕೆ.ಆರ್.ನಗರಕ್ಕೆ ಕನಿಷ್ಟ 5 ಗಂಟೆಗಳ ಪ್ರಯಾಣ ಎಂದರೆ ಗೊತ್ತಿಲ್ಲ.

<u>ಮರುವಿಚಾರಣೆಃ</u> ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ.